# JANUARY 30, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ 30 ಸಾವಿರ ಕೆರೆಗಳ** ಸಮೀಕ್ಷಾ ಕಾರ್ಯ, ಕಂದಾಯ ಇಲಾಖೆಯಿಂದ, ಪೂರ್ಣ.
- **ರಾಜ್ಯದ 833 ವಸತಿ ಶಾಲೆಗಳಿಗೆ,** ಆಕಾಶ ಕಾಯ ವೀಕ್ಷಣೆಗೆ, ದೂರದರ್ಶಕ ಯಂತ್ರ ಪೂರೈಕೆ.
- **ಮಹಾತ್ಮ ಗಾಂಧೀಜಿ ಪುಣ್ಯತಿಥಿ;** ಸರ್ವೋದಯ ದಿನ ಹಾಗೂ ರಾಜ್ಯಾದ್ಯಂತ 'ಸ್ಪರ್ಷ ಕು ್ಠ ರೋಗ ಅರಿವು ಆಂದೋಲನ'ಕ್ಕೆ ಇಂದು ಚಾಲನೆ.
- **ಮಂಗಳೂರಿನಲ್ಲಿ ಫೆಬ್ರವರಿ 2 ರಂದು,** 'ಮೇಯರ್ ಕಪ್' ರಾಜ್ಯ ಮಟ್ಟದ, ಈಜು ಸ್ಪರ್ಧೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದಲ್ಲಿ ಒಟ್ಟು 40 ಸಾವಿರದ 998 ಕೆರೆಗಳಿದ್ದು,** 30 ಸಾವಿರ ಕೆರೆಗಳ ಸಮೀಕ್ಷಾ ಕಾರ್ಯವನ್ನು, ಕಂದಾಯ ಇಲಾಖೆ ಪೂರ್ಣಗೊಳಿಸಿದೆ; ಬಾಕಿ 10 ಸಾವಿರದ 754 ಕೆರೆಗಳ ಸಮೀಕ್ಷೆಯನ್ನು, ಆರು ತಿಂಗಳ ಒಳಗಾಗಿ ಪೂರ್ಣಗೊಳಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಮುಖ್ಯಮಂತ್ರಿ ಗೃಹ ಕಚೇರಿ ಕೃ ್ಣದಲ್ಲಿ ನಡೆದ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಭೆಯ ಅಧ್ಯಕ್ಷತೆವಹಿಸಿ, ಅವರು ಮಾತನಾಡಿದರು. ಕೆರೆ ಒತ್ತುವರಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಮಳೆಗಾಲದ ಒಳಗಾಗಿ ಕೆರೆ ಒತ್ತುವರಿಯನ್ನು ತೆರವುಗೊಳಿಸಿ, ಕೆರೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವಂತೆ, ಮುಖ್ಯಮಂತ್ರಿ ಅಧಿಕಾರಿಗಳಿಗೆ ನಿರ್ದೇಶಿಸಿದರು.

<><><>

**ರಾಜ್ಯದಲ್ಲಿ ಒಟ್ಟು 9 ತಾರಾಲಯಗಳ** ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದ್ದು, 5 ಪೂರ್ಣಗೊಂಡಿವೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಗೃಹ ಕಚೇರಿ ಕೃಷ್ಣದಲ್ಲಿ ಅವರು, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಎಚ್.ನರಸಿಂಹಯ್ಯ ಅಂತಾರಾಷ್ಟ್ರೀಯ ವಿಜ್ಞಾನ ಕೇಂದ್ರದ ಸ್ಥಾಪನೆಗೆ, 32 ಎಕರೆ ಜಾಗೆ ನೀಡಲಾಗಿದ್ದು, ಇಲಾಖೆಯ ಸುಪರ್ದಿಗೆ ಪಡೆಯುವಂತೆ, ಅವರು ಸೂಚಿಸಿದರು. ವಿದ್ಯಾರ್ಥಿಗಳಿಗೆ ಆಕಾಶ ಕಾಯಗಳ ಬಗ್ಗೆ ಆಸಕ್ತಿ ಮೂಡಿಸಲು, ರಾಜ್ಯದ 833 ವಸತಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ದೂರದರ್ಶಕ ಒದಗಿಸಲಾಗುವುದು ಎಂದರು.

<><><>

**ಮೌನಿ ಅಮಾವಾಸ್ಯೆ ನಿಮಿತ್ತ,** ಉತ್ತರಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಿನ್ನೆ, ಮಹಾಕುಂಭ ಮೇಳದ ಪುಣ್ಯ ಸ್ನಾನಕ್ಕೆ, ಭಕ್ತರ ಸಂಖ್ಯೆ ಹೆಚ್ಚಳದಿಂದ, ಕಾಲ್ತುಳಿತ ಉಂಟಾಗಿದೆ. ಬೆಳಗಾವಿಯ 30 ಜನರ ತಂಡದ ಪೈಕಿ, ನಾಲ್ವರು ಯಾತ್ರಾರ್ಥಿಗಳು ಕಾಲ್ತುಳಿತದಲ್ಲಿ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ವಡಗಾವಿ ನಿವಾಸಿಯಾಗಿದ್ದ 50 ವರ್ಷದ ಜ್ಯೋತಿ ಹತ್ತವಾಟ ಹಾಗೂ ಅವರ ಮಗಳು 25 ವರ್ಷದ, ಮೇಘಾ ಹತ್ತವಾಟ, ಶೆಟ್ಟಿ ಗಲ್ಲಿಯ 61 ವರ್ಷದ ಅರುಣ ಕೋಪರ್ಡೆ, ಶಿವಾಜಿ ನಗರದ 48 ವರ್ಷದ ಮಹಾದೇವಿ ಬಾವನೂರು, ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿದ್ದಾಗಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ಸಹ ತೆರೆಯಲಾಗಿದ್ದು, ಸಹಾಯವಾಣಿ ಸಂಖ್ಯೆ 83124 07200 ಗೆ ಸಂಪರ್ಕಿಸಿ, ಮಾಹಿತಿ ಪಡೆಯಬಹುದು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ** ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ಎಕ್ಸ್ ಮಾಧ್ಯಮದಲ್ಲಿ ದುರ್ಘಟನೆ ಬಗ್ಗೆ ಪ್ರತಿಕ್ರಿಯಿಸಿ, ಕಾಲ್ತುಳಿತದಲ್ಲಿ ಗಾಯಗೊಂಡಿರುವ ರಾಜ್ಯದ ಯಾತ್ರಿಗಳನ್ನು ಕರೆತರಲು, ಅಧಿಕಾರಿಗಳನ್ನು ನಿಯೋಜಿಸಲಾಗಿದೆ; ಮೃತದೇಹಗಳು ಇಂದು ಬೆಳಗಾವಿ ತಲುಪಲಿವೆ. ಕುಂಭಮೇಳದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಜಾಗರೂಕತೆಯಿಂದ ಇರುವಂತೆ ಅವರು, ಮನವಿ ಮಾಡಿದ್ದಾರೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು,** ಪ್ರಧಾನಮಂತ್ರಿ ನರೇಂದ್ರ ಮೋದಿ, ಎಕ್ಸ್ ಮಾಧ್ಯಮದಲ್ಲಿ, ಮಹಾಕುಂಭ ಮೇಳದಲ್ಲಿ ಕಾಲ್ತುಳಿತ ಘಟನೆ ಅತ್ಯಂತ ದುಃಖಕರ. ಮೃತರ ಕುಟುಂಬಗಳಿಗೆ ತಾವು ಸಂತಾಪ ಸೂಚಿಸುತ್ತಿದ್ದು, ಘಟನೆಯಲ್ಲಿ ಗಾಯಗೊಂಡವರು ಶೀಘ್ರವೇ ಗುಣಮುಖರಾಗಲು ಪ್ರಾರ್ಥಿಸುವುದಾಗಿ ಹೇಳಿದ್ದಾರೆ.

<><><>

**ಪಶ್ಚಿಮಘಟ್ಟದ ಕಾಡಿನಲ್ಲಿ,** 32 ಪ್ರಭೇದದ, ಕ್ಯಾಸನೂರು ಫಾರೆಸ್ಟ್ ಡಿಸೀಸ್ ಉಣುಗು–ಗಳಲ್ಲಿ, 'ಹೆಮಾಫಿಸಾಲಿಸ್' ಮತ್ತು 'ರೈಪಿಸೆಫಾಲಸ್' ಎರಡು ಪ್ರಜಾತಿಯ ಉಣುಗುಗಳು, ಅನುವಂಶಿಕವಾಗಿ ವೈರಾಣುವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತಿರುವುದು, ಸಂಶೋಧನೆಯಿಂದ ದೃಢಪಟ್ಟಿದೆ.

ಕೆ.ಎಫ್.ಡಿ. ಬಗ್ಗೆ ಕಳೆದ 6 ವರ್ಷಗಳಿಂದ, ರಾಜ್ಯ ಆರೋಗ್ಯ ಇಲಾಖೆ, ಐ.ಸಿ.ಎಂ.ಆರ್. ಹಾಗೂ ಐ.ಸಿ.ಎ.ಆರ್. ಸಂಸ್ಥೆಗಳ ಸಹಯೋಗದಲ್ಲಿ, 'ಮಂಕಿ ಫಿವರ್ ರಿಸ್ಕ್' ತಂಡ, ಉಣುಗುಗಳ ಬಗ್ಗೆ ಅಧ್ಯಯನ ನಡೆಸುತ್ತ ಬಂದಿದೆ. ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಶಿವಮೊಗ್ಗದ ವಿಜ್ಞಾನಿ ಡಾಕ್ಟರ್ ದರ್ಶನ್ ನಾರಾಯಣ.

<><><>

**ಡಾ. ದರ್ಶನ ನಾರಾಯಣ ಧ್ವನಿ 45 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಮಹಾತ್ಮ ಗಾಂಧಿಯವರ ಪುಣ್ಯತಿಥಿ ಗೌರವಾರ್ಥ,** ಪ್ರತಿ ವರ್ಷ ಜನವರಿ 30 ರಂದು, ಸರ್ವೋದಯ ದಿನವನ್ನು ಆಚರಿಸಲಾಗುತ್ತದೆ. ಜನವರಿ 30, 1948 ರಂದು ಹತರಾದ ಮಹಾತ್ಮ ಗಾಂಧಿಯವರನ್ನು ಗೌರವಿಸಲು, ಈ ದಿನವನ್ನು ಹುತಾತ್ಮರ ದಿನ ಎಂದು ಆಚರಿಸಲಾಗುತ್ತದೆ.

<><><>

**ಮಹಾತ್ಮ ಗಾಂಧೀಜಿ ಪುಣ್ಯತಿಥಿ ಹಿನ್ನೆಲೆ,** ಆರೋಗ್ಯ ಇಲಾಖೆ, ಇಂದಿನಿಂದ ಫೆಬ್ರವರಿ 13ರ ವರೆಗೆ, 'ಸ್ಪರ್ಷ ಕುಷ್ಠ ರೋಗ ಅರಿವು ಆಂದೋಲನ' ರಾಜ್ಯಾದ್ಯಂತ ಆಯೋಜಿಸಿದೆ.

<><><>

**ಗಾಂಧೀಜಿ ಅವರ ಶಾಂತಿ, ಸಾಮರಸ್ಯದ** ಸಮಾಜ ಪರಿಕಲ್ಪನೆ ಕುರಿತು, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವಲ್ಲಿ, ಗಾಂಧಿ ಅಧ್ಯಯನ ಕೇಂದ್ರದ ಪಾತ್ರ ಮಹತ್ವದ್ದಾಗಿದೆ ಎಂದು, ಗಾಂಧಿ ಭವನದ ಅಧ್ಯಕ್ಷ ನಾಡೋಜ ವೂಡೇ ಪಿ. ಕೃಷ್ಣ ಹೇಳಿದ್ದಾರೆ. ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ, ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ನೂತನ ಕಟ್ಟಡವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

**ಗಾಂಧೀಜಿ ಅವರ ಹೋರಾಟದ ಬದುಕು** ಕುರಿತ ಛಾಯಾಚಿತ್ರ ಪ್ರದರ್ಶನ ಗಣ್ಯರು ವೀಕ್ಷಿಸಿದರು.

<><><>

**ಬೆಂಗಳೂರು ನಗರ ವಿಶ್ವವಿದ್ಯಾಲಯದ** ಉಪ ಕುಲಪತಿ ಲಿಂಗರಾಜ ಗಾಂದಿ ಮಾತನಾಡಿ, ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ಮೂಲಕ, ಗಾಂಧೀಜಿ ಅವರ ತತ್ವಾದರ್ಶಗಳು, ಚಿಂತನೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನ ನಿರಂತರ ನಡೆಯಲಿದೆ ಎಂದರು.

<><><>

**ಈ ಮಧ್ಯೆ, ಜ್ಞಾನಜ್ಯೋತಿ ಸಭಾಂಗಣದಲ್ಲಿ** ಆಯೋಜಿಸಿದ್ದ, 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಗಣ್ಯರು ಪಾಲ್ಗೊಂಡರು.

<><><>

**ಶತಮಾನಗಳ ಇತಿಹಾಸವುಳ್ಳ,** ಬೀದರ ಕೋಟೆ, ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ ಸುಪರ್ದಿಯಲ್ಲಿದೆ. ಬೀದರ ಕೋಟೆಯ ಸಂರಕ್ಷಣೆ, ಸ್ವಚ್ಛತೆ ಹಾಗೂ ಪ್ರವಾಸೋದ್ಯಮದ ದೃಷ್ಟಿಯಿಂದ ಅಭಿವೃದ್ಧಿ ಪಡಿಸುವ ಬಗ್ಗೆ, ಸ್ವಯಂ ಸೇವಾ ಸಂಘಟನೆಯ ಮೂಲಕ, ಜನ ಜಾಗೃತಿ ಮೂಡಿಸುತ್ತಿರುವ, ಬೀದರಿನ ವಿನಯ ಕುಮಾರ ಮಾಳ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ವಿನಯ ಕುಮಾರ ಮಾಳ್ಗೆ ಧ್ವನಿ 50 ಸೆಕೆಂದುಗಳು**

<><><>

**ಮಂಗಳೂರು ಮಹಾನಗರ ಪಾಲಿಕೆ** ಹಾಗೂ ಎ ವನ್ ಅಕ್ವಾಟಿಕ್ ಕ್ಲಬ್, ಫೆಬ್ರವರಿ 2 ರಂದು, ಮಂಗಳೂರಿನಲ್ಲಿ ರಾಜ್ಯ ಮಟ್ಟದ 'ಮೇಯರ್ ಕಪ್' ಈಜು ಸ್ಪರ್ಧೆ ಆಯೋಜಿಸಿದೆ ಎಂದು, ಮೇಯರ್ ಮನೋಜ್ ಕುಮಾರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಬಾಲಕ ಬಾಲಕಿಯರ ಒಟ್ಟು 14 ವಿಭಾಗಗಳಲ್ಲಿ, ಸ್ಪರ್ಧೆ ಜರುಗಲಿದೆ. ನಾನ್ ಮೆಡ್ಲಿಸ್ಟ್ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, 70 ವಯಕ್ತಿಕ ವಿಭಾಗ ಹಾಗೂ ಆರು ರಿಲೇ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 350ಕ್ಕೂ ಹೆಚ್ಚು ಈಜು ಪಟುಗಳು ಭಾಗವಹಿಸಲಿದ್ದಾರೆ. ತಂತ್ರಜ್ಞಾನ ಆಧರಿಸಿ, ಈಜುಕೂಟದ ಹೀಟ್ ಲಿಸ್ಟ್ ತಯಾರಿಸಲಾಗಿದೆ ಎಂದು ಮೇಯರ್ ಹೇಳಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಶ್ರೀ ಪುರಂದರ ದಾಸರ ಆರಾಧನೆ ನಿಮಿತ್ತ,** ವಿಜಯನಗರ ಜಿಲ್ಲೆ, ಹಂಪಿಯ ಪುರಂದರ ಮಂಟಪದಲ್ಲಿ ದಾಸ ಸಾಹಿತ್ಯ ಚಿಂತನೆ ಮತ್ತು ಆರಾಧನೆ ಕಾರ್ಯಕ್ರಮ ಜರುಗಿತು.

<><><>

**ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಸಮತೋಲನ** ನಿವಾರಣಾ ಸಮಿತಿ ಸಭೆ, ಇಂದು ಮಧ್ಯಾಹ್ನ 2 ಗಂಟೆಗೆ, ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಲಿದೆ.

<><><>

**ರಾಜ್ಯ ಮಾನವ ಹಕ್ಕುಗಳ ಆಯೋಗ,** ಇಂದು ಕೋಲಾರ ಜಿಲ್ಲೆಯಲ್ಲಿ ಸಭೆ ನಡೆಸಲಿದೆ.

<><><>

**ಧಾರವಾಡದ ಅಂಗಾಂಗ ದಾನಿ,** ರೋಹಿತ ಜಗದೀಶ ಕುಂಬಾರ ಅವರ ಕುಟುಂಬಸ್ಥರನ್ನು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಗೌರವಿಸಿದರು.

<><><>

**ವೈಜ್ಞಾನಿಕ ಚಿಂತಕ ಎಚ್.ನರಸಿಂಹಯ್ಯ** ಅವರ ಜನ್ಮ ಶತಮಾನೋತ್ಸವದ ಅಂಗವಾಗಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಆಯೋಜಿಸಿದ, 'ವಿಜ್ಞಾನದೆಡೆಗೆ ನಮ್ಮ ನಡಿಗೆ' ಜಾಥಾ, ದೊಡ್ಡಬಳ್ಳಾಪುರ ತಲುಪಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದ 30 ಸಾವಿರ ಕೆರೆಗಳ** ಸಮೀಕ್ಷಾ ಕಾರ್ಯ, ಕಂದಾಯ ಇಲಾಖೆಯಿಂದ, ಪೂರ್ಣ.
- **ರಾಜ್ಯದ 833 ವಸತಿ ಶಾಲೆಗಳಿಗೆ,** ಆಕಾಶ ಕಾಯ ವೀಕ್ಷಣೆಗೆ, ದೂರದರ್ಶಕ ಯಂತ್ರ ಪೂರೈಕೆ.
- **ಮಹಾತ್ಮ ಗಾಂಧೀಜಿ ಪುಣ್ಯತಿಥಿ;** ಸರ್ವೋದಯ ದಿನ ಹಾಗೂ ರಾಜ್ಯಾದ್ಯಂತ 'ಸ್ಪರ್ಷ ಕು ್ಠ ರೋಗ ಅರಿವು ಆಂದೋಲನ'ಕ್ಕೆ ಇಂದು ಚಾಲನೆ.
- **ಮಂಗಳೂರಿನಲ್ಲಿ ಫೆಬ್ರವರಿ 2 ರಂದು,** 'ಮೇಯರ್ ಕಪ್' ರಾಜ್ಯ ಮಟ್ಟದ, ಈಜು ಸ್ಪರ್ಧೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>